<u>ಪ್ರಧಾನ ನ್ಯಾಯಾದೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ, ಕುಂದಾಪುರ</u>

ಸಿಸಿ ನಂಬ್ರಃ 346/2024
ಸಿಡಬ್ಲ್ಯೂ- 02

ಪಿಡಬ್ಲ್ಯೂ- 02

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಮನು |
| ತಂದೆಯ ಹೆಸರು | ಃ | ಮುರುಳಿ |
| ಪ್ರಾಯ | ಃ | 31 ವರ್ಷ, |
| ಉದ್ಯೋಗ | ಃ | ಅಕೌಂಟೆಂಟ್ |
| ವಾಸ | ಃ | ಹೆಂಗವಳ್ಳಿ, ಅತ್ತಾರ್ ಜೆಡ್ಡು. |

ದಿನಾಂಕಃ **18-07-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u>

ಚಾ ಸಾ.1 ನನ್ನ ಅಜ್ಜ. ಚಾ ಸಾ.4 ನನ್ನ ತಾಯಿ. ಅಕ್ಟೋಬರ್ 14, 2015 ರಂದು ನಾನು ಮನೆಯಿಂದ ಹೊರಗೆ ಮೊಬೈಲ್ ರಿಪೇರಿಗೆ ಹೋಗಿದ್ದಾಗ ಮನೆಯಲ್ಲಿ ಯಾರೂ ಇರಲಿಲ್ಲ. ನನ್ನ ತಾಯಿ ಚಾ ಸಾ.4, ನನ್ನ ತಮ್ಮ ಚಾ ಸಾ.6 ಮನೆಯಿಂಂದ ಹೊರಗೆ ಹೋಗಿದ್ದಾಗ ಚಾ ಸಾ.1 ರವರು ಮನೆಯಲ್ಲಿ ಇದ್ದಾಗ ನಾನು 3.45 ಕ್ಕೆ ಹಾಲಾಡಿ ಹತ್ತಿರ ಬರುವಾಗ ಚಾ ಸಾ.1 ರವರು ಪಕ್ಕದ ಅಂಗಡಿಯವರ ಮೊಬೈಲಿನಿಂದ ನನಗೆ ಕರೆ ಮಾಡಿ 1 ಮತ್ತು 2 ನೇ ಆರೋಪಿತರಿಬ್ಬರು ಬಂದು, ನಾನು ಬೊಗಳಿದಾಗ ಅವರು ಬಾಗಿಲು ತೆಗೆದು ಹೊರಗೆ ನೋಡಿದಾಗ 1 ಮತ್ತು 2 ನೇ ಆರೋಪಿತರು ನಿಂತಿದ್ದು, ನಮಗೆ ಜಾಗ ಕೊಟ್ಟಿದ್ದು ಸುಬ್ಬು ಪೂಜಾರ್ತಿ ಇವರು, ಯಾಕೆ ಅವರಿಗೆ ಕಿರುಕುಳ ಕೊಡುತ್ತೀರಾ ಎಂದು ಚಾ ಸಾ .1 ರವರ ಬಳಿ ಜಗಳ ಆಡಿರುತ್ತಾರೆ. ಆಗ ನನ್ನ ಅಜ್ಜ ನನಗೂ ಅದಕ್ಕೂ ಸಂಬಂದ ಇಲ್ಲ ಎಂದು ಹೇಳಿರುತ್ತಾರೆ. ನನ್ನ ಮಗಳು ದೂರು ಕೊಟ್ಟಿದ್ದು, ಅದು ಅವಳನ್ನೇ ಕೇಳಬೇಕು ಎಂದು ಹೇಳಿರುತ್ತಾರೆ. ಅವರ ವಿರುದ್ಧ ಅವಾಚ್ಯ ಶಬ್ದದಿಂದ ಬೈದು ಹಲ್ಲೆ ಮಾಡಿರುತ್ತಾರೆ. ಅವರ ಹೆಂಡತಿ ಬಂದು ಕುತ್ತಿಗೆ ಹಿಡಿದಿದ್ದರು, ವಾಸುರವರು ರಟ್ಟೆಗೆ ಕೊಲಿನಲ್ಲಿ ಹೊಡೆದಿರುತ್ತಾರೆ. ಅವರು ಆಯ ತಪ್ಪಿ ಕೆಳಗೆ ಬಿದ್ದರು.

ಸಿಸಿ ನಂಬ್ರಃ 346/2024
ಸಿಡಬ್ಲ್ಯೂ- 02

2. ನಮಗೂ ಮತ್ತು ಸುಬ್ಬು ಪೂಜಾರಿಯವರಿಗೆ ಜಾಗದ ವಿಚಾರದಲ್ಲಿ ತಕರಾರು ಇರುತ್ತದೆ. ಇಲ್ಲಿಂದ ಜಾಗ ಖಾಲಿ ಮಾಡಿ ಎಂದು ಅವರಿಬ್ಬರು ನನ್ನ ಅಜ್ಜಿಗೆ ದೂಡಿದರು, ಅವರು ಬಿದ್ದ ಮೇಲೆ ಅಲ್ಲಿಂದ ಹೊರಟು ಹೋದರು. ತದನಂತರ ನಾನು ಮನೆಗೆ ಹೋದಾಗ ಮನೆಯಲ್ಲಿ ಯಾರೂ ಇರಲಿಲ್ಲ, ಅವರ ಕೈಗೆ ಸ್ವಲ್ಪ ಗಾಯ ಆಗಿತ್ತು. ನಮ್ಮ ತಾಯಿ ಬಂದು ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ಅದಕ್ಕೂ ಮುಂಚೆ ಅವರು ಪೊಲೀಸಿನವರು ಬಂದು ದೂರನ್ನು ತೆಗೆದುಕೊಂಡಿರುತ್ತಾರೆ. ಅವರಿಗೆ ಕನ್ನಡ ಬರುವುದಿಲ್ಲ, ನಾನೇ ದೂರನ್ನು ಚಾ ಸಾ.1 ರವರು ಹೇಳಿದಂತೆ ಬರೆದಿರುತ್ತೇನೆ. ಸಾಕ್ಷಿ ಈಗ ದೂರಿನಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು, ನಿಪಿ.1 ಎಂದು ಈಗಾಗಲೇ ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ.1 ಬಿ ಎಂದು ಗುರುತಿಸಲಾಯಿತು. ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ

ನಮ್ಮ ಅತ್ತೆಗೆ ಯಾಕೆ ಬೈದಿದ್ದೀಯಾ ಎಂದು ಆರೋಪಿತ ಚಾ ಸಾ1 ರವರಿಗೆ ಬೈದಿರುತ್ತಾರೆ ಎಂದರೆ ಸರಿ. ಇನ್ನು ಮುಂದೆ ಸುಬ್ಬು ಪೂಜಾರ್ತಿಯ ವಿಚಾರಕ್ಕೆ ಬಂದರೆ ನಿಮ್ಮನ್ನು ಕೊಲ್ಲುತ್ತೇವೆ ಎಂದು ಬೆದರಿಕೆ ಹಾಕಿ ಹೋಗಿರುತ್ತಾರೆ ಎಂದರೆ ಸರಿ. ಆರೋಪಿತರ ಪರಿಚಯ ನನಗೆ ಇರುವುದಿಲ್ಲ. ಪೊಲೀಸರಿಗೆ ನಾನು 20 ನೇ ತಾರೀಖಿನಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿ.

ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು ಆರ್ ಎಸ್ ರವರಿಂದ

ನನ್ನ ತಾಯಿ ಚಾ ಸಾ.4 ಆರೋಪಿತರ ವಿರುದ್ಧ ಮೊದಲು ದೂರು ದಾಖಲಿಸಿದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನಮಗೂ ಆರೋಪಿತರಿಗೂ ಸಿವಿಲ್ ವ್ಯಾಜ್ಯವಿದ್ದ ಬಗ್ಗೆ ದಾವೆ ನನ್ನ ತಾಯಿ ಸಲ್ಲಿಸಿರುತ್ತಾರೆ, ಆ ಬಗ್ಗೆ ನನ್ನ ತಾಯಿಗೆ ಗೊತ್ತಿರುತ್ತದೆ. ನಮ್ಮ ಮನೆಯ ಅಕ್ಕಪಕ್ಕ ಬಸವ ಶೆಟ್ಟರು, ಸುಭಾಶ್ ಕುಲಾಲ್ ಹಾಗೂ ನಾಗು ಪೂಜಾರ್ತಿ ಎಂಬುವವರ ಮನೆಗಳು ಇರುತ್ತವೆ. ನನಗೆ ಕಾಲ್ ಮಾಡಿದವರ ಹೆಸರು ಶಂಕರ ಪೂಜಾರಿಯವರು. ನಮ್ಮ ಮನೆಯಿಂದ ಅವರ ಧಿನಸಿ ಅಗಂಡಿ 500 ಮೀಟರ್ ದೂರದಲ್ಲಿ ಇದೆ. ಆ ದಿನ ಆ ಅಂಗಡಿಗೆ ತುಂಬಾ ಜನ ಬಂದು ಹೋಗುತ್ತಾರೆ ಎಂದರೆ ಸರಿ. ನಾನು ಪೊಲೀಸ್ ಠಾಣೆಗೆ ಹೋಗಿರಲಿಲ್ಲ. ನನಗೆ ವೈಯಕ್ತಿಕವಾಗಿ ಮಾಹಿತಿ

ಸಿಸಿ ನಂಬ್ರಃ 346/2024
ಸಿಡಬ್ಲ್ಯೂ- 02

ಇರುವುದಿಲ್ಲ. ಅಜ್ಜಿ ಹೇಳಿದ್ದರಿಂದ ಗೊತ್ತಾಗಿರುತ್ತದೆ.

ನಾನು ಮನೆಗೆ ಬಂದಾಗ 4.10 ಗಂಟೆ ಆಗಿತ್ತು. ಆ ತಕ್ಷಣ ಪೊಲೀಸರಿಗೆ ತಿಳಿಸಲು ನನಗೆ ತೊಂದರೆ ಇರಲಿಲ್ಲ. ಘಟನೆ ನಡೆದಾಗ ಯಾರು ಇದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಘಟನೆ ನಡೆದಾಗ ಇವರನ್ನು ಹೊರತುಪಡಿಸಿ ಬೇರೆ ಯಾರು ಇದ್ದ ಬಗ್ಗೆ ಚಾ ಸಾ.1 ನನಗೆ ಹೇಳಿರುವುದಿಲ್ಲ. ಆರೋಪಿತರ ಅತ್ತೆಯ ಮನೆ ನಮ್ಮ ಮನೆಯಿಂದ 50 ಮೀಟರ್ ದೂರದಲ್ಲಿ ಇರುತ್ತದೆ. ನಮಗೂ ಆರೋಪಿತರಿಗೂ 10 ವರ್ಷಗಳಿಂದ ಸಿವಿಲ್ ವ್ಯಾಜ್ಯ ಇರುತ್ತದೆ. ನಾನು ಆಸ್ಪತ್ರೆಗೆ ಹೋಗಿರುವುದಿಲ್ಲ. ಎಡಗೈಯ ಮೊಣಕೈಗೆ ಪೆಟ್ಟಾಗಿರುತ್ತದೆ. ಅದು ಬಿಟ್ಟು ಎಲ್ಲೂ ಪೆಟ್ಟಾಗಿರುವುದಿಲ್ಲ. ನಮಗೂ ಆರೋಪಿತರಿಗೂ ಜಾಗದ ಪ್ರಕರಣದ ಇರುವುದರಿಂದ ಅಜ್ಜಿಯನ್ನು ಬಳಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನಮ್ಮ ಜಾಗಕ್ಕೆ ಅತಿಕ್ರಮ ಪ್ರವೇಶ ಮಾಡಿರುವುದಿಲ್ಲ, ಅವ್ಯಾಚ್ಯ ಶಬ್ದದಿಂದ ಬೈದಿರುವುದಿಲ್ಲ ಹಾಗೂ ಕೊಲೆ ಬೆದರಿಕೆ ಹಾಕಿರುವುದಿಲ್ಲ ಎಂದರೆ ಸಾಕ್ಷಿ ಸಮ್ಮನಿರುತ್ತಾರೆ. ಸದರಿ ಪ್ರಕರಣಕ್ಕೂ ಆರೋಪಿತರಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲ</u>

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

ಪ್ರಧಾನ ಸಿವಿಲ್ ನ್ಯಾಯಾದೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ